## ನಿನಗೆ ಗೊತ್ತಿಲ್ಲವಲ್ಲ...

ಪಾರ್ಕಿನಲ್ಲಿ ಸಿದ್ಧ ಒಬ್ಬನೇ ಕೂತಿದ್ದ. ಅವನನ್ನು ಹುಡುಕಿಕೊಂಡು ಬಂದ ಅವನ ಗೆಳೆಯ ವೆಂಕ, 'ಏನೋ ಒಬ್ಬನೇ ಕೂತಿದ್ದೀಯಾ? ವಿಷಯ ಗೊತ್ತಾಯಿತಾ?' ಎಂದು ಆತುರದಿಂದ ಕೇಳಿದ.

ಸಿದ್ಧ: 'ಗೊತ್ತಿಲ್ಲ, ಮಾರಾಯ. ನೀನು ಯಾಕೋ ಗಾಬರಿಗೊಂಡಹಾಗಿದೆ?'

ವೆಂಕ: 'ನನ್ನ ಹೆಂಡತಿ ಎದುರು ಮನೆ ಲಕ್ಷ್ಮಣನ ಜೊತೆ ಮಾಲ್‌ಗೆ ಸುತ್ತಾಡಲು ಹೋದ ಸುದ್ದಿ ನಿನಗೆ ಗೊತ್ತಾಯಿತಾ?'

ಸಿದ್ಧ: 'ಗೊತ್ತಿಲ್ಲ. ನೀನು ಹೇಳಿದ ಮೇಲೆಯೇ ಗೊತ್ತಾಗಿದ್ದು.'

ವೆಂಕ: 'ಸದ್ಯ, ನಿನಗೆ ಗೊತ್ತಿಲ್ಲವಲ್ಲ. ಅಷ್ಟು ಸಾಕು...'

**ಅನುರಾಧ ನಿರಂಜನ**



## ಪಂಥ

ಅಪ್ಪ ಮಗಳು ಇಬ್ಬರೂ ಒಬ್ಬರಿಗೊಬ್ಬರು ಪ್ರಶ್ನೆ ಕೇಳುವುದು ಮತ್ತು ಉತ್ತರಿಸದಿದ್ದ ಪಕ್ಷದಲ್ಲಿ ಸೋತವರು ಗೆದ್ದವರಿಗೆ ಹತ್ತು ರೂಪಾಯಿ ಕೊಡುವ ಪಂಥ ಹಾಕಿಕೊಂಡರು. ಅದರಂತೆ ಅಪ್ಪ ಮಗಳಿಗೆ ಕೇಳಿದ, 'ಬರೀ ದಡ್ಡರೇ ಇರುವ ಜಗತ್ತಿನಲ್ಲಿ ಬುದ್ಧಿವಂತ ಯಾರು?' ಎಷ್ಟೇ ಯೋಚಿಸಿದರೂ ಮಗಳಿಗೆ ಉತ್ತರ ಹೊಳೆಯಲಿಲ್ಲ. ಅವಳು ಹತ್ತರ ಒಂದು ನಾಣ್ಯವನ್ನು ಅಪ್ಪನ ಕೈಗಿತ್ತಳು. ಈಗ ಮಗಳು ಅಪ್ಪನನ್ನು ಕೇಳಿದಳು, 'ಬರೀ ದೊಡ್ಡವರೇ ಇರುವ ಜಗತ್ತಿನಲ್ಲಿ ಚಿಕ್ಕವರು ಯಾರು?' ಎಷ್ಟೇ ತಲೆಕೆರೆದುಕೊಂಡರೂ ಅಪ್ಪನಿಗೆ ಉತ್ತರ ಹೊಳೆಯಲಿಲ್ಲ. ಕೊನೆಗೆ ಅವನು ಮಗಳಿಗೆ ಹತ್ತು ರೂಪಾಯಿ ನೀಡಿದ. ಅಂತ್ಯದಲ್ಲಿ ಅಪ್ಪ ಮಗಳಿಗೆ ಅವಳು ಕೇಳಿದ ಪ್ರಶ್ನೆಗೇ ಉತ್ತರ ಹೇಳುವಂತೆ ಕೇಳಿದ. ಆಗ ಮಗಳು ಅಪ್ಪನ ಕೈಗೆ ಒಂದು ನಾಣ್ಯವನ್ನಿಟ್ಟು ಒಳಗೆ ಓಡಿದಳು.

**ಪ.ನಾ. ಹಳ್ಳಿ ಹರೀಶ್‌ಕುಮಾರ್**




ಕಲೆ: ಗಣೇಶ್ ಆಚಾರ್ಯ